(ದಿನಾಂಕಃ 24.11.2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ವಿ.ಎಸ್.ಕೆ ರವರಿಂದ ಃ-</u>**

1. ನನ್ನ ತಾಯಿ ವಾದಿ ಹಾಗೂ ಪ್ರತಿವಾದಿ 1 ಮತ್ತು 2 ರವರ ಕೃಷ್ಣಪ್ಪ ಮತ್ತು ಅಕ್ಕಮ್ಮ ದಂಪತಿಯ ಮಕ್ಕಳು ಎಂದು ಸೂಚಿಸಿದರೆ ಸರಿ. ನಮ್ಮ ಅಜ್ಜ ಅಂದರೆ ಪ್ರತಿವಾದಿ 1 ಮತ್ತು 2 ಮತ್ತು ವಾದಿಯ ತಂದೆಯಾದ ಕೃಷ್ಣಪ್ಪ ರವರು ದಾವಾ ಸ್ವತ್ತುಗಳನ್ನು ಗೇಣಿದಾರನಾಗಿ ಉಳುಮೆ ಮಾಡುತ್ತಿರುವುದರಿಂದ ಭೂ ನ್ಯಾಯ ಮಂಡಳಿ ರವರ ಮುಂದೆ ಅರ್ಜಿಯನ್ನು ದಾಖಲಿಸಿರುತ್ತಾರೆ ಎಂದರೆ ಸರಿ.

2. ದಿನಾಂಕಃ 24.05.1979 ರಂದು ಭೂ ನ್ಯಾಯ ಮಂಡಳಿಯವರು ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಎಲ್.ಆರ್.ಎಫ್.ಟಿ ನಂಬರ್ 3/1974-75 ರಂತೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿ.

3. ನನ್ನ ಅಜ್ಜ ತನ್ನ ಜೀವಿತಾ ಅವಧಿಯಲ್ಲಿ ಫಾರಂ ನಂಬರ್ 10 ಅನ್ನು ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಈ ದಾವೆಯಲ್ಲಿರುವ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನಾನು ಹಾಜರುಪಡಿಸಿದ ನಿಪಿ8 ರಿಂದ ನಿಪಿ10 ರ ಪಹಣಿ ಪತ್ರಿಕೆಯಲ್ಲಿ ನಾವು ತೋರಿಸದಷ್ಟು ದಾವಾ ಆಸ್ತಿಗಳ ವಿಸ್ತೀರ್ಣಕ್ಕೆ ಸಂಬಂಧಪಟ್ಟಂತೆ ಅಷ್ಟು ಖಾತೆ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದಲ್ಲಿ ರಿಟ್ ಪಿಟೀಷನ್ ಬಾಕಿ ಇರುತ್ತದೆ ಎಂದು ನುಡಿಯುತ್ತಾರೆ.

4. ನಾನು ಸದರಿ ರಿಟ್ ಪಿಟೀಷನ್ ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ನಮಗೆ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಭೂ ನ್ಯಾಯ ಮಂಡಳಿಯು ಆದೇಶ ಮಾಡಿ ನಂತರ ದಾವಾ ಆಸ್ತಿಗಳ ಸ್ಥಾನಿಕವಾಗಿ ಪರಿಶೀಲಿಸಿ ಅಳತೆ ಮಾಡಿಸಿ ಸದರಿ ಅಳತೆಯ ಆಧಾರದ ಮೇಲೆ ಫಾರಂ ನಂಬರ್ 10 ಅನ್ನು ನೀಡಿರುತ್ತಾರೆ ಎಂದು ಸೂಚಿಸಿದರೆ ಸರಿಯಲ್ಲ.

5. ನಾನು ಹಾಜರುಪಡಿಸಿದ ನಿಪಿ7 ರಂತೆ ವಾದಿ ಮತ್ತು ಪ್ರತಿವಾದಿ 1 ಮತ್ತು 2 ರವರ ಹೆಸರಿನಲ್ಲಿ ಖಾತೆ ಆಗಿರುತ್ತದೆ ಎಂದು ಸೂಚಿಸಿದರೆ ಸರಿ. ನಾನು ಪ್ರತಿವಾದಿ 1 ಮತ್ತು 2 ರವರಿಗೆ ದಾವಾ ಆಸ್ತಿಗಳಲ್ಲಿ ಪಾಲನ್ನು ಕೊಡಬಾರದು ಎಂದು ನನ್ನ ತಾಯಿಯ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸಿದರೆ ಸರಿಯಲ್ಲ.

6. ನಮ್ಮ ಅಜ್ಜ ಅಜ್ಜಿ ತನ್ನ ಜೀವಿತಾಅವಧಿಯಲ್ಲಿ ಹಾಗೂ ವಾದಿ ಮತ್ತು ಪ್ರತಿವಾದಿ 1 ಮತ್ತು 2 ರ ಜೀವಿತಾಅವಧಿಯಲ್ಲಿ ದಾವೆಯನ್ನು ಸಲ್ಲಿಸುವವರೆಗೆ ಕಾನೂನು ಅಡಿಯಲ್ಲಿ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ದಾವಾ ಸ್ವತ್ತನ್ನು ತನ್ನ ಕಣ್ಣಳತೆಯಲ್ಲಿ ಉಳುಮೆ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ.

7. ಪ್ರತಿವಾದಿ 2 ರವರನ್ನು ಸಾಗರದ ಪ್ರಭಾಕರ ಟಿ.ಕೆ ಎಂಬುವವರಿಗೆ ವಿವಾಹ ಮಾಡಿಕೊಟ್ಟಿರುತ್ತಾರೆ ಎಂದು ಸೂಚಿಸಿದರೆ ಸರಿ. ನಿಪಿ7 ರಂತೆ ಖಾತೆ ಆದ ವಿಸ್ತೀರ್ಣದ ಜಮೀನಿನಲ್ಲಿ ನನ್ನ ತಾಯಿಗೆ ಮತ್ತು ನನ್ನ ಮಾವನಾದ ಪ್ರತಿವಾದಿ 1 ಮತ್ತು ನಮ್ಮ ದೊಡ್ಡಮ್ಮನಾದ ಪ್ರತಿವಾದಿ 2 ರವರಿಗೆ ಸಮಾನವಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

8. ಸಾಕ್ಷಿಗೇ ಒಂದು ದಾಖಲೆಯನ್ನು ತೋರಿಸಿ ಅದು ದಾವಾ ಆಸ್ತಿಳಿಗೆ ಸಂಬಂಧಪಟ್ಟಂತೆ ಎಲ್.ಆರ್.ಎಫ್.ಟಿ 3/1974-75 ರ ಆದೇಶ ಪುಟದ ಜೆರಾಕ್ಸ ಪ್ರತಿ ಆಗಿರುವುದರಿಂದ ಅದನ್ನು ನಿಶಾನೆಗೆ ಒಳಪಡಿಸಿರುವುದಿಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.